ಶ್ರೀ ಎಂ. ಎಸ್. ಕೃಷ್ಣನ್.—ನೀವು ಒಳ್ಳೆಯ ಅಭಿಪ್ರಾಯದಿಂದಲೇ, ಒಳ್ಳೆಯ ಆಧಾರದ ಮೇಲೆಯೇ ಮಾಡಿದ್ದೀರಿ ಎಂದು ನೋಡಿದರೆ, ಇದು ಸಮಸ್ಯೆಗೆ ಎಡೆಮಾಡಿಕೊಟ್ಟಿದೆ. ಮಾನ್ಯ ಬಿ. ವಿ. ಕಕ್ಕಿಲಾಯರವರನ್ನು ತೆಗೆದುಕೊಂಡು ಹೋಗಿ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ಗೆ ಹಾಕಿರುತ್ತೀರಿ. ಅವರನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೋ ಅಥವಾ ಕಾರ್ಮಿಕ ಇಲಾಖೆಗೋ ಹಾಕಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಆದ್ದರಿಂದ ಸದಸ್ಯರನ್ನು ನೇಮಿಸುವಾಗ ಅದಕ್ಕೆ ಏನಾದರೂ ನಾರಮ್ಸ್ ಇದೆಯೇ ? ಈಗ ಆಗಿರತಕ್ಕಂಥದ್ದಕ್ಕೆ ಏನಾದರೂ ಸೂಚನೆ ಕೊಟ್ಟು ಅದನ್ನು ಪುನರ್ ವಿಮರ್ಶೆ ಮಾಡಲಿಕ್ಕೆ ಸಾಧ್ಯತೆ ಇರುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದವರು ಎಲ್ಲಾ ನಿಯಮಗಳನ್ನು ಅನುಸರಿಸಿಯೇ ಸಮಿತಿಗಳನ್ನು ಮತ್ತು ಸದಸ್ಯರನ್ನು ನೇಮಿಸಿರತಕ್ಕಂಥದ್ದಾಗಿರುತ್ತದೆ. ಮಾನ್ಯ ಕಕ್ಕಿಲಾಯರವರನ್ನು ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ಗೆ ನೇಮಿಸಿರತಕ್ಕಂಥದ್ದಕ್ಕೆ ಅವರಿಗೆ ಅರ್ಹತೆ ಇದೆ. ಅವರಿಗೆ ಅನುಭವವಿದೆ, ಅವರು ಅಲ್ಲಿ ಚೆನ್ನಾಗಿ ಕೆಲಸವನ್ನು ನಿರ್ವಹಿಸುತ್ತಾರೆನ್ನುವ ದೃಷ್ಟಿಯಿಂದ ಆ ಸ್ಥಳಕ್ಕೆ ಸೇರಿಸಲಾಗಿದೆ. ದಯವಿಟ್ಟು ಏನಾದರೂ ಸೂಚನೆ ಕೊಡಿ. ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ ಎಂಬುದಾಗಿ ಹೇಳುತ್ತೇನೆ.

ಶ್ರೀ ವಿ. ಧನಂಜಯ ಕುಮಾರ್.—ಈ ರೀತಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸಲು ವಿದ್ಯಾರ್ಹತೆ ಮತ್ತು ಸೇವಾ ಅವಧಿ ನಿರ್ದಿಷ್ಟವಾಗಿ ಏನಾದರೂ ಇರಬೇಕೆಂಬುದು ಇರುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ವಿದ್ಯಾರ್ಹತೆ, ಸೇವಾ ಅವಧಿ ನಿಯಮಾವಳಿಯಲ್ಲಿ ಏನೊಂದೂ ಇರುವುದಿಲ್ಲ.

ವಿಷಯ : ಮಾರಾಟಕರ ನಿಯಮಾವಳಿಗಳನ್ನು ಸರಳಗೊಳಿಸುವ ಬಗ್ಗೆ.

ಪ್ರ. 257 (93) ಡಾ. ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಜ್ಯದಲ್ಲಿ ಈಗಿರುವ ಮಾರಾಟಕರ ವಸೂಲಾತಿ ನಿಯಮಾವಳಿಯಿಂದ ಅತ್ಯಧಿಕ ಕಿರುಕುಳ ಭ್ರಷ್ಟಾಚಾರಗಳು ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಮಾರಾಟಕರ ನಿಯಾಮಾವಳಿಗಳನ್ನು ಸರಳಗೊಳಿಸುವುದರ ಬಗ್ಗೆ ಸರಕಾರದವರಲ್ಲಿ ಸಲಹೆ ಏನಾದರೂ ಇದೆಯೇ ;

(ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ ?

ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು).—

(ಅ) ಕಿರುಕುಳದ ಬಗ್ಗೆ ಕೆಲವು ದೂರುಗಳು ಬಂದಿವೆ.

(ಆ) ಮತ್ತು (ಇ) ಕಾಯಿದೆ ಮತ್ತು ಕಾನೂನಿನ ನಿಯಮಗಳನ್ನು ಸರಳಗೊಳಿಸುವ ಕೆಲವು ಕ್ರಮಗಳನ್ನು ಕೈಗೊಳ್ಳುವ ವಿಚಾರ ಸರ್ಕಾರಕ್ಕಿದೆ. ಕರ್ನಾಟಕ ಮಾರಾಟ ತೆರಿಗೆ ಜಟಿಲವಾದ ಉಪಬಂಧಗಳ ಕಾರ್ಯ ವಿಧಾನವನ್ನು ಸರಳಗೊಳಿಸುವ ದಿಸೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೈಗೊಂಡ ಕ್ರಮಗಳು ರಿಯಾಯಿತಿ ದರದ ಒಪ್ಪಂದ (ಕಾಂಪೋಜಿಷನ್ ಸ್ಕೀಮ್) ಮತ್ತು ಕ್ಷಿಪ್ರಕರ ನಿರ್ಧಾರಣಾ ಯೋಜನೆ (ಸಮ್ಮರಿ ಅಸೆಸ್‌ಮೆಂಟ್ ಸ್ಕೀಮ್) ಗಳಿಗೆ ಸಂಬಂಧಪಟ್ಟಿವೆ. ಪ್ರಪತ್ರಗಳ ಸಂಖ್ಯೆಯನ್ನು ಮತ್ತು ಅವುಗಳ ಕಾಲನಿಯಮವನ್ನು ಇಳಿಸುವ ಶಕ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಡಾ. ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಸೇಲ್ಸ್‌ಟ್ಯಾಕ್ಸ್ ವಸೂಲಿಯ ಬಗ್ಗೆ ನಿಯಮಗಳನ್ನು ಸರಳಗೊಳಿಸುವ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿರುತ್ತಾರೆ. ವರ್ತಕರು ಸೇಲ್ಸ್‌ಟ್ಯಾಕ್ಸ್, ಎಂಟ್ರಿಟ್ಯಾಕ್ಸ್, ಸರ್‌ಛಾರ್ಜ್ ಎಂದು ಟರ್ನ್‌ಓವರ್ ಮೇಲೆ ಸಿಂಗಲ್‌ಪಾಯಿಂಟ್ ಎಂದೂ, ಮಲ್ಟಿಪಾಯಿಂಟ್ ಎಂದೂ, ಬೇರೆ ಬೇರೆ ವಿಧದಲ್ಲಿ 4ನೇ ಮತ್ತು 5ನೇ ಷೆಡ್ಯೂಲ್‌ನಲ್ಲಿ ತೋರಿಸಿರುವಂತೆ ವಸೂಲು ಮಾಡುತ್ತಿರುತ್ತಾರೆ. ಹೊಸ ಸರ್ಕಾರ ಬಂದಮೇಲೆ ಇದನ್ನು ಸರಳಗೊಳಿಸಲು ಏನಾದರೂ ಹೆಜ್ಜೆಯನ್ನು ಇಟ್ಟಿದ್ದೀರಾ ಎಂದು ಕೇಳುತ್ತೇನೆ. ಎರಡನೆಯದಾಗಿ ಹಿಂದೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕ್ವಾರ್ಟರ್ಲಿ ಬುಲೆಟಿನ್‌ನಲ್ಲಿ ಎಲ್ಲಾ ಮಾಹಿತಿಯನ್ನು ಕೊಟ್ಟು ಹೊರಡಿಸುತ್ತಿದ್ದರು. ಈಗ ಅದನ್ನು ನಿಲ್ಲಿಸಿರುತ್ತಾರೆ. ಅದನ್ನು ಮತ್ತೆ ಹೊರಡಿಸಲು ಸರ್ಕಾರ ಪ್ರಯತ್ನ ಮಾಡುತ್ತದೆಯೇ ? ಸೇಲ್ಸ್ ಟ್ಯಾಕ್ಸ್ ಸರ್ಕಾರಕ್ಕೆ ಹಣ ಬರತಕ್ಕಂಥ ಒಂದು ದೊಡ್ಡ ಮೂಲ. ಈ ಬಾಬಿನಿಂದ ಎಷ್ಟು ಹಣ ಸರ್ಕಾರಕ್ಕೆ ಬರುತ್ತದೆ, ಮತ್ತು ಎಷ್ಟು ಸೋರಿ ಹೋಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಹಲವು ರೀತಿಯಲ್ಲಿ ಕಾನೂನುಗಳನ್ನು ಜಾರಿಗೊಳಿಸುತ್ತಾರೆ.

Karnataka Sales Tax Act, Central Sales Tax Act, Karnataka Entertainment Tax, Karnataka Tax on Professional Trades, Callings and